# ಜಂಪ್ ಡೆಪಾಸಿಟ್; ಇರಲಿ ಎಚ್ಚರ

**ಸೈಬರ್ ಖದೀಮರ ಕಣ್ಣು ಈಗ ಯುಪಿಐ ಮೇಲೆ ಬಿದ್ದಂತಿದೆ. ‘ಜಂಪ್ ಡೆಪಾಸಿಟ್’ ಮೂಲಕ ಯುಪಿಐ ಬಳಕೆದಾರರ ಖಾತೆಯ ಹಣ ಎಗರಿಸುತ್ತಿದ್ದಾರೆ!**

**■ ಶಶಿಕುಮಾರ್ ಸಿ.**

ದೇಶದಲ್ಲಿ ಯುಪಿಐ ಆಧರಿತ ವಹಿವಾಟು ಹೆಚ್ಚಾಗುತ್ತಿದ್ದಂತೆ ಸೈಬರ್ ಅಪರಾಧಿಗಳ ಕಣ್ಣು ಇದರತ್ತ ಬಿದ್ದಂತಿದೆ. ‘ಜಂಪ್ ಡೆಪಾಸಿಟ್’ ಅನ್ನುವ ವಿಧಾನ ಕಂಡುಕೊಂಡಿರುವ ಸೈಬರ್ ಕಳ್ಳರು, ಯುಪಿಐ ಐಡಿ ಮೂಲಕ ಸಾರ್ವಜನಿಕರ ಬ್ಯಾಂಕ್ ಖಾತೆಗಳಿಂದ ಲಕ್ಷಾಂತರ ರೂಪಾಯಿ ಎಗರಿಸುತ್ತಿದ್ದಾರೆ.

ಈ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಪೊಲೀಸ್ ಅಧಿಕಾರಿಗಳು ಅರಿವು ಮೂಡಿಸುತ್ತಿದ್ದಾರೆ. ಆದರೆ, ‘ಇಂಥದ್ದೊಂದು ಪ್ರಕರಣವೇ ತನ್ನ ವೇದಿಕೆಯಲ್ಲಿ ನಡೆದಿಲ್ಲ’ ಎಂದು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ವಾದಿಸುತ್ತಿದೆ. ಆದಾಗ್ಯೂ ಎಚ್ಚರಿಕೆಯಿಂದ ಇರುವುದು ಯುಪಿಐ ಬಳಕೆದಾರರ ಜವಾಬ್ದಾರಿ.

### ಏನಿದು ಜಂಪ್ ಡೆಪಾಸಿಟ್ ಸ್ಕ್ಯಾಮ್?

ಸೈಬರ್ ಖದೀಮರು ಮೊದಲು ಸಾರ್ವಜನಿಕರ ಯುಪಿಐ ಐಡಿಗೆ ಸಣ್ಣ ಮೊತ್ತದ (50ರಿಂದ 1000 ರೂಪಾಯಿ) ಹಣ ಪಾವತಿಸುತ್ತಾರೆ. ತಪ್ಪಾಗಿ ಹಣ ವರ್ಗಾವಣೆ ಮಾಡಿದ್ದು, ಅದನ್ನು ರಿಟರ್ನ್ ಮಾಡುವಂತೆ ಲಿಂಕ್ ಒಳಗೊಂಡ ಮೆಸೇಜ್ ಅನ್ನು ಅದರ ಹಿಂದೆಯೇ ಕಳುಹಿಸುತ್ತಾರೆ.

ಈ ನಡುವೆ ಯಾರೋ ತಮ್ಮ ಖಾತೆಗೆ ಹಣ ಹಾಕಿದ್ದಾರೆಂಬ ಖುಷಿಯಲ್ಲಿರುವ ಸಾರ್ವಜನಿಕರು, ತಮಗೆ ಹಣ ಹಾಕಿದವರು ಯಾರು ಎಂದು ತಿಳಿದುಕೊಳ್ಳಲು ಅಥವಾ ಮೆಸೇಜ್ ಏನಿರಬಹುದು ಎಂಬ ಕಾರಣಕ್ಕೆ ಕುತಂತ್ರಾಂಶದಿಂದ ಕೂಡಿದ ಆ ಲಿಂಕ್ ಕ್ಲಿಕ್ಕಿಸಿರುತ್ತಾರೆ. ಇದರಿಂದ ಕುತಂತ್ರಾಂಶವು ಸಾರ್ವಜನಿಕರ ಮೊಬೈಲ್‌ನಲ್ಲಿ ಸಕ್ರಿಯಗೊಳ್ಳುತ್ತದೆ.

ಅದಾದ ಕೆಲವೇ ಕ್ಷಣಗಳಲ್ಲಿ ತಮ್ಮ ಖಾತೆಗೆ ಹಣ ಬಂದಿದೆಯೋ ಇಲ್ಲವೋ ಎಂಬುದನ್ನು ತಿಳಿಯಲು ತಾವು ಬಳಸುತ್ತಿರುವ ಯುಪಿಐ ಆ್ಯಪ್‌ಗಳಿಗೆ ಲಾಗಿನ್ ಆಗಿ, ಬ್ಯಾಲೆನ್ಸ್ ಚೆಕ್ ಮಾಡಲು ಪಿನ್ ನಮೂದಿಸುತ್ತಾರೆ. ಈಗಾಗಲೇ ಫೋನ್‌ನಲ್ಲಿ ಸಕ್ರಿಯವಾಗಿರುವ ಕುತಂತ್ರಾಂಶವು ಯುಪಿಐ ಪಿನ್ ಅನ್ನು ಸೈಬರ್ ಖದೀಮರಿಗೆ ರವಾನಿಸುತ್ತದೆ. ಅದಾದ ಕ್ಷಣಾರ್ಧದಲ್ಲಿ ಸಾರ್ವಜನಿಕರ ಖಾತೆಯಲ್ಲಿನ ಹಣವನ್ನು ಖದೀಮರು ಎಗರಿಸುತ್ತಾರೆ. ಈ ಇಡೀ ಜಾಲವನ್ನು ‘ಜಂಪ್ ಡೆಪಾಸಿಟ್ ಹಗರಣ’ ಎಂದು ಕರೆಯಲಾಗುತ್ತಿದೆ.




ತೆಲಂಗಾಣ ಪೊಲೀಸ್ ಅಧಿಕಾರಿಗಳು ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸೋಷಿಯಲ್ ಮೀಡಿಯಾಗಳ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದಾರೆ. ಅವರು ಸೂಚಿಸಿರುವ ಸುರಕ್ಷತಾ ಕ್ರಮಗಳು ಹೀಗಿವೆ.

- ಅನಾಮಿಕರಿಂದ ಯುಪಿಐ ಮೂಲಕ ಹಣ ಬಂದಾಗ ಜಾಗೃತರಾಗಬೇಕು.
- ತಪ್ಪಾಗಿ ಹಣ ವರ್ಗಾವಣೆ ಆದ ಬಗ್ಗೆ ಕರೆ ಅಥವಾ ಮೆಸೇಜ್ ಬಂದರೆ ಅವುಗಳನ್ನು ಕಡೆಗಣಿಸುವುದು ಉತ್ತಮ.
- ಹಣ ಬಂದ ತಕ್ಷಣವೇ ತಾವು ಬಳಸುತ್ತಿರುವ ಯುಪಿಐ ಪೇಮೆಂಟ್ಸ್ ಆ್ಯಪ್‌ಗಳಿಗೆ ಲಾಗಿನ್ ಆಗಿ, ಬ್ಯಾಲೆನ್ಸ್ ಚೆಕ್ ಮಾಡಲು ಪಿನ್ ನಮೂದಿಸಬಾರದು.
- ಅರ್ಧ, ಒಂದು ಗಂಟೆಯ ನಂತರ ಬ್ಯಾಲೆನ್ಸ್ ಚೆಕ್ ಮಾಡುವುದು ಒಳಿತು. ಅಷ್ಟರಲ್ಲಿ, ಖದೀಮರು ಕಳುಹಿಸಿದ ಕುತಂತ್ರಾಂಶ ಒಳಗೊಂಡ ಹಣ ವಿಥ್‌ಡ್ರಾ ರಿಕ್ವೆಸ್ಟ್ ಅವಧಿ ಮುಕ್ತಾಯಗೊಳ್ಳಲಿದೆ.
- ಯಾವುದೇ ಪಾವತಿ ವಿನಂತಿಯನ್ನು ಎರಡು ಬಾರಿ ಪರಿಶೀಲಿಸಿ. ಅನುಮಾನಾಸ್ಪದವೆಂದು ತೋರಿದರೆ, ನಿರಾಕರಿಸುವುದು ಉತ್ತಮ. ■

## ಸಿಮ್ ಕಾರ್ಡ್ ವ್ಯಾಲಿಡಿಟಿ ವಿಸ್ತರಣೆ

ರೀಚಾರ್ಜ್ ಮಾಡದ ಹೊರತು ಸಿಮ್ ಕಾರ್ಡ್‌ಗಳ ವ್ಯಾಲಿಡಿಟಿ ಅವಧಿಯು 90 ದಿನಗಳವರೆಗೆ ವಿಸ್ತರಣೆಯಾಗಿದೆ. ಆ ಬಳಿಕ 20 ರೂಪಾಯಿ ರೀಚಾರ್ಜ್ ಮಾಡಿಕೊಂಡರೆ ಮತ್ತೆ 30 ದಿನಗಳ ವ್ಯಾಲಿಡಿಟಿ ಲಭ್ಯವಾಗಲಿದೆ.

ದೇಶದ ಟೆಲಿಕಾಂ ಕಂಪನಿಗಳಿಗೆ ಅನ್ವಯವಾಗುವಂತೆ ಇಂಥದ್ದೊಂದು ನಿಯಮಗಳನ್ನು ಭಾರತೀಯ ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಈಚೆಗೆ ಜಾರಿಗೆ ತಂದಿದೆ. ಇದರನ್ವಯ ಜಿಯೊ, ಏರ್‌ಟೆಲ್, ವಿಐ ಮತ್ತು ಬಿಎಸ್‌ಎನ್‌ಎಲ್‌ನ ಸಿಮ್ ಕಾರ್ಡ್‌ಗಳನ್ನು ದೀರ್ಘಾವಧಿಯವರೆಗೆ ರೀಚಾರ್ಜ್ ಮಾಡದೆಯೇ ಸಕ್ರಿಯವಾಗಿರಿಸಬಹುದು.

ರೀಚಾರ್ಜ್ ಅವಧಿ ಮುಗಿಯುವ ಮುಂಚೆ ಮತ್ತು ನಂತರದ ಅವಧಿಯಲ್ಲಿ ಎಲ್ಲ ಟೆಲಿಕಾಂ ಕಂಪನಿಗಳು ಆ ಬಗ್ಗೆ ಜ್ಞಾಪನಾ ಕರೆಗಳನ್ನು ಮಾಡುತ್ತಲೇ ಇರುತ್ತವೆ. ಜೊತೆಗೆ ನಿಮ್ಮ ಸಿಮ್ ಕಾರ್ಡ್ ನಿಷ್ಕ್ರಿಯಗೊಳ್ಳಲಿದೆ ಎಂಬುದಾಗಿಯೂ ಸಾರುತ್ತವೆ. ಇದರಿಂದ ಗಡಿಬಿಡಿಗೊಳ್ಳಲಿರುವ ಬಳಕೆದಾರರು ತಕ್ಷಣ ರೀಚಾರ್ಜ್ ಮೊರೆಹೋಗುವುದುಂಟು.

ಟೆಲಿಕಾಂ ಕಂಪನಿಗಳ ಈ ನಡೆಯ ಬಗ್ಗೆ ವ್ಯಾಪಕ ದೂರುಗಳು ಬಂದ ಹಿನ್ನಲೆ ಹೊಸ ನಿಯಮಗಳನ್ನು ಜಾರಿಗೊಳಿಸಲಾಗಿದೆ. ಒಂದಕ್ಕಿಂತ ಹೆಚ್ಚಿನ ಸಿಮ್ ಕಾರ್ಡ್‌ಗಳನ್ನು ಬಳಸುವವರು ಪ್ರತಿ ತಿಂಗಳು ತಾವು ಬಳಸುತ್ತಿರುವ ಎಲ್ಲ ಸಿಮ್ ಕಾರ್ಡ್‌ಗಳಿಗೂ ರೀಚಾರ್ಜ್ ಮಾಡುವ ಹೆಚ್ಚುವರಿ ಹೊರೆಯಿಂದ ತಪ್ಪಿಸಿಕೊಂಡಂತಾಗಿದೆ.

ಜಿಯೊ, ಏರ್‌ಟೆಲ್, ವಿಐ ಹಾಗೂ ಬಿಎಸ್‌ಎನ್‌ಎಲ್ ಕಂಪನಿಗಳ ಸಿಮ್ ಕಾರ್ಡ್‌ಗಳ ರೀಚಾರ್ಜ್ ಹೊರತಾದ ವ್ಯಾಲಿಡಿಟಿ ಅವಧಿಯು 90 ದಿನಗಳು ಇದ್ದು, ಅದರ ನಂತರದ ಹೆಚ್ಚುವರಿ ವ್ಯಾಲಿಡಿಟಿ ಅವಧಿಯು ಒಂದು ವಾರದಿಂದ ಒಂದು ತಿಂಗಳವರೆಗೆ ಇರುತ್ತದೆ. 20 ರೂಪಾಯಿ ರೀಚಾರ್ಜ್ ಮಾಡಿಸಿಕೊಂಡರೆ, ಹೆಚ್ಚುವರಿಯಾಗಿ 30 ದಿನಗಳವರೆಗೆ ವ್ಯಾಲಿಟಿಡಿ ಲಭ್ಯವಾಗಲಿದೆ.

ಮೂರು ತಿಂಗಳಾದರೂ ರೀಚಾರ್ಜ್ ಮಾಡದಿದ್ದರೆ, ಹೆಚ್ಚುವರಿ ಅವಧಿ ಮುಕ್ತಾಯವಾದ ಬಳಿಕ ಸಿಮ್ ಕಾರ್ಡ್ ನಿಷ್ಕ್ರಿಯಗೊಳಿಸಿ, ಬೇರೊಬ್ಬರಿಗೆ ಅದೇ ಸಂಖ್ಯೆಯ ಸಿಮ್ ಕಾರ್ಡ್ ನೀಡಲಾಗುತ್ತದೆ. ■